| | | |
|---|---|---|
| ಎಲ್ ಎ ಸಿ | 37/2021 | ಆರ್.ಡಬ್ಲ್ಯೂಃ 1 |

ಇಂದು ದಿಃ 14.07.2026 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ ಎಸ್ ಎಸ್ ವಕೀಲರಿಂದಃ

ಅಡಕನಹಳ್ಳಿ ಗ್ರಾಮದ ಸರ್ವೆ ನಂ. 110/1ರ ಆಸ್ತಿ ನನ್ನ ಅಜ್ಜಿ ಚಿಕ್ಕಮಲ್ಲಮ್ಮನಿಗೆ ಸೇರಿದ್ದು. ನನ್ನ ಅಜ್ಜಿಗೆ ಸೇರಿದ ಆಸ್ತಿ ಎಂದು ತೋರಿಸಲು ದಾಹ ಪತ್ರ ಕೊಟ್ಟಿದ್ದೇನೆ. ಆಸ್ತಿಯು ನನ್ನ ಅಜ್ಜಿ ಆಸ್ತಿ ಆದ ಕಾರಣ ಪರಿಹಾರವನ್ನು ಕೆ ಎ ಐ ಡಿ ಬಿಯಿಂದ ಪಡೆದುಕೊಳ್ಳಲು ತೊಂದರೆ ಇತ್ತೇ ಎಂದರೆ ಬೀಳು ಜಮೀನು ಆದ ಕಾರಣ ತೊಂದರೆ ಇತ್ತು ಎನ್ನುತ್ತಾರೆ. ಬೀಳು ರೆಸ್ಟೋರ್ ಗೆ ಅರ್ಜಿಯನ್ನು ನನ್ನ ತಂದೆ ಎನ್ ಪಿ ಮಹದೇವಯ್ಯ ಕೊಟ್ಟಿದ್ದರು. ಅಡಕನಹಳ್ಳಿ ಗ್ರಾಮದ ಸರ್ವೆ ನಂ. 110/1ರ ಆಸ್ತಿ 2 ಎಕರೆ 18 ಗುಂಟೆ ನನ್ನ ತಂದೆ ಆಸ್ತಿ ಎಂದು ತೋರಿಸಲು ಕೆ ಎ ಐ ಡಿ ಬಿಯಿಂದ ಕೊಟ್ಟ ಅರ್ಜಿ ಸಲ್ಲಿಸಿರುತ್ತೇನೆ. ಆದರೆ ಬೀಳು ಆಸ್ತಿಯಾದ ಕಾರಣ ಆರ್ ಟಿ ಸಿ ಪಟ್ಟಾ ಪುಸ್ತಕ ದಾಖಲೆಗಳನ್ನು ಕೊಟ್ಟಿಲ್ಲ ಕೆ ಎ ಐ ಡಿ ಬಿ ರವರು ಭೂ ಸ್ವಾದೀನಪಡಿಸಿಕೊಂಡಾಗ ಆಸ್ತಿ ನನ್ನ ತಂದೆ ಹೆಸರಿನಲ್ಲಿ ಇರಲಿಲ್ಲ. ಚಿಕ್ಕಮಾದ ನನ್ನ ಅಜ್ಜಿಯ ಅಣ್ಣ. ಚಿಕ್ಕಮಾದನಿಗೆ ಆಸ್ತಿಯ ದಾಖಲೆಯಾಗಿದೆ ಎಂಬ ಬಗ್ಗೆ ನ್ಯಾಯಾಲಯಕ್ಕೆ ದಾಖಲೆ ಕೊಟ್ಟಿದ್ದೇನೆ.

ತಕರಾರುದಾರರು 1 ರಿಂದ 5ರವರು ಪರಿಹಾರದ ಹಣ ಅವರಿಗೆ ಸೇರಬೇಕೆಂದು ಕೇಳಿಕೊಂಡಿರುತ್ತಾರೆ, ಆದರೆ ಅವರಿಗೆ ಅದರಲ್ಲಿ ಹಕ್ಕು ಇಲ್ಲ ಎನ್ನುತ್ತಾರೆ. ಪರಿಹಾರದ ಹಣವು ತಕರಾರುದಾರರಿಗೆ ಹೊರತುಪಡಿಸಿ ನನಗೆ ಸೇರಬೇಕೆಂಬ ಬಗ್ಗೆ ನ್ಯಾಯಾಲಯಕ್ಕೆ ದಾಖಲೆಯನ್ನು ಕೊಟ್ಟಿದ್ದೇನೆ. ಬೀಳು ಆಸ್ತಿಯು ರೆಸ್ಟೋರ್ ಆಗಿರುವುದಿಲ್ಲ. ಆ ಆಸ್ತಿಯು ಕೆ ಎ ಐ ಡಿ ಬಿ ಗೆ ಭೂ ಸ್ವಾಧೀನವಾದ ಕಾರಣ ನಮ್ಮ ಅರ್ಜಿಯನ್ನು ಮಾನ್ಯ ಮಾಡಲಾಗುವುದಿಲ್ಲ ಎಂದು ತಹಸೀಲ್ದಾರರು ಹಿಂಬರಹವನ್ನು ಕೊಟ್ಟಿದ್ದಾರೆ. ಬೀಳು ಆಸ್ತಿ ರೆಸ್ಟೋರ್ ಆಗದಿದ್ದರೆ ಪರಿಹಾರ ಪಡೆಯಲು ನಾವು ಅರ್ಹರಲ್ಲ ಎಂದರೆ ಸರಿಯಲ್ಲ.

ತಕರಾರುದಾರರ ಪಾಟೀ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಜೆ.ಎಂ.ಎಫ್.ಸಿ., ನಂಜನಗೂಡು.